ಗಾಂಜಾ ರೂಲ್‌ಶಿಗೆ ಸಂಬಂಧಪಟ್ಟ ಆರ್ಡಿಕ್ಸ್ A.

ಗಾಂಜಾ ಸಾಗುವಳಿದಾರನ ಲೈಸೆನ್ಸಿಯಾನೆ ಪಟ್ಟೆ.

——————ಡಿಸ್ಟ್ರಿಕ್ಟು——————————ತಾಲ್ಲೂಕು ಅಮಲ್‌ದಾರರಿಂದ.

1885ನೇ ಇಸವಿ ಫಿಬ್ರವರೀ 27ನೇ ಮತ್ತು ಂ 229ನೇ ನಂಬರುಳ್ಳ ದಿರ್ಮಾರವರ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡ ಲ್ಪಟ್ಟ Iನೇ ನಂಬರ್ ರೂಲ್ಸ್ ಅನುಸರಿ ಯಿದರದೆಕೇಯಿಂದ——————ತಾಲ್ಲೂಕಿನ——————ಗ್ರಾಮದಲ್ಲಿರುವ——ಗೆ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ, ಮತ್ತು ಸದರೀ——————ನ ಹಿಡುವಳಿಯಲ್ಲಿರುವ——————ಯಕರೆ————ಗುಂಟೆ ವಿಸ್ತೀರ್ಣ ಉಳ್ಳ————ರೂಪಾಯಿ ಆಕಾರವುಳ್ಳ——ನೇ ನಂಬರ್ ಜಮೀನಿನಲ್ಲಿ ಭಂಗೀಗಿಡ ಸಾಗುವಳೀಮಾಡಿ ಗಾಂಜಾ ಯಂಬ ನಿಷಾ ವಸ್ತುವ ನ್ನ ಇದರಡೀಕಂಡ ಷರತ್ತುಗಳ ಮೇಲೆ ಉತ್ಪತ್ತಿ ಮಾಡುವ ಬಗ್ಗೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತೆ.

I. ತಯಾರ್ಮಾಡಲ್ಪಟ್ಟ ಗಾಂಜಾವಿನ ತೇಡಾದು ಗ್ರಾಮದ ಪಟೇಲ ಮತ್ತು ಶ್ಯಾನುಭೋಗರಿಗೆ ತಿಳಿಸಲ್ಪಟ್ಟು ಅವರ ಸಮಕ್ಷಮ ಆದು ವಜನಿ ಮಾಡಲ್ಪಟ್ಟು ಮತ್ತು ಅದರ ವಿಲಾವಾರಿಯು ಕರಾರ್‌ವಾಕಾ ಆಗಿಯೂ ಕ್ರಮವಾಗಿಯೂ ತೋರಿಸಲ್ಪಡತಕ್ಕದ್ದು.

II. ತಯಾರ್ಮಾಡಲ್ಪಟ್ಟ ಗಾಂಜಾ, ಸಾಧಾರಣವಾಗಿ ವಂಮತಿಂಗಳ ವಳಗಾಗಿಯಾಗಲೀ ಅಥವಾ ಡೆಪ್ಯೂಟಿ ಕಮ್ಮಿಷನರವರಿಂದ ಮುಂದಾಗಿ ಅಪ್ಪಣೆ ಪಡೆದು ಆದು ತಯಾರ್ಮಾಡಲ್ಪಟ್ಟ ಮೂರು ತಿಂಗಳ ವಳಗಾಗಿಯಾಗಲೀ ಗವರ್ನಮೆಂಟ್ ತರಫ: ಕಂಟ್ರಾಕ್ಟುದಾರನಿಗೆ ನ್ಯಾಯವಾದ ಮೌಲ್ಯಕ್ಕೆ ವಿಕ್ರಯಿಸಲ್ಪಡತಕ್ಕದ್ದು, ಯಾ I) ಫಾರಂ ಪ್ರಕಾರ ಲೈಸೆನ್ಸ್ ಅನುಸರಿ ರಫ್ತು ಮಾಡಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ ಗಾಂಜಾ ಜಪ್ತು ಮಾಡಲ್ಪಟ್ಟು ಸರಕಾರದಿಂದ ವಿಕ್ರಯಿಸಲ್ಪಡುವದು.

III. ಲೈಸೆನ್ಸುದಾರನು, ಅವನಿಗೆ ಅಪೇಕ್ಷೆಯಿದ್ದರೆ, ಆವನ ಸ್ವಂತಖರ್ಚಿನ ಬಗ್ಗೆ ಅಮಲ್‌ದಾರರಿಂದ ಕೊಡಲ್ಪಡುವ ಪ್ಯಾಸೆನ ಆಧಾರದ ಮೇಲೆ ಮತ್ತು ಭಂಗಿ ಸಾಗುವಳೀ ಮಾಡಲ್ಪಟ್ಟ ಜಮೀನು ವಂದು ಯಕರೆಗಿಂತ ಕಮ್ಮಿ ಯಿಲ್ಲದ ಪಕ್ಷದಲ್ಲಿ 14 ಪೌಂಡಿಗಳಿಗಿಂತ ಜಾಸ್ತಿ ಅಲ್ಲದ ಗಾಂಜಾವನ್ನ ಉಳಸಿಕೊಳ್ಳಬಹುದು. ಹಾಗಿಲ್ಲದ ಪಕ್ಷದಲ್ಲಿ ಸ್ವಂತ ಖರ್ಚಿನ ಬಗ್ಗೆ ಅವಕಾಶ ಕೊಡಲ್ಪಡಲಾರದು. ಲೈಸೆನ್ಸುದಾರನು ಈ ರೂಲ್ಸ್ ಅನುಸರಿ ತನ್ನ ಸ್ವಂತ ಉಪಯೋಗದ ಬಗ್ಯಾಗಿ ಉಳಸಿಕೊಂಡ ಗಾಂಜಾವೆನ್ನ ವಿಕ್ರಯಿಸಕೂಡದು ಯಾ ಅನ್ಯಥಾ ವಿಲಾ ಮಾಡಕೂಡದು.

IV. ಈ ಲೈಸೆನ್ಸಿಯಾನೆ ಪಟ್ಟೆಯು ವಂದು ವರುಷಕ್ಕೆ ಅಂದರೆ——————ಲಾಯಿತು————ವರಿಗೆ ಜಾರೀಯ ಲ್ಲಿರತಕ್ಕದ್ದು, ಮತ್ತು ಯಿದರಲ್ಲಿಯಾಗಲೀ ಯಕ್ಸೈಸ್ ಆಕ್ಟಿನಲ್ಲಾಗಲೀ ಯಾ ಅದನ್ನನುಸರಿ ಮಾಡಲ್ಪಟ್ಟ ರೂಲ್ಸ್‌ನಲ್ಲಾಗಲಿ ಅಡಗಿ ಯಿರತಕ್ಕ ಯಾವ ಷರತ್ತುಗಳನ್ನಾದರೂ ಉಲ್ಲಂಘಿಸಿದರೆ ಲೈಸೆನ್ಸುದಾರನು ಸದರೀ ಯಕ್ಸೈಸ್ ಆಕ್ಟಿನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ ಸಂಬಂಧಪಟ್ಟ ತಪ್ಪಾಂ ನಿಷಾ ಪದಾರ್ಥವೂ ಜಪ್ತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

V. ಈ ಲೈಸೆನ್ಸಿಯಾನೆ ಪಟ್ಟೆಯು, ಮೇಲೆಕಂಡ ಕಲಮಿನಲ್ಲಿ ಕಂಡ ವಾಯಿದೆಯು ಪೂರೈಸಿದ ತರುವಾಯ ತಾಲ್ಲೂಕು ಅಮಲ್‌ದಾರರಿಗೆ ವಾಪಸ್ ಮಾಡಲ್ಪಡತಕ್ಕದ್ದು, ಮತ್ತು ಸದರೀ ಆಫೀಸರರು ತಯಾರ್ ಮಾಡಲ್ಪಟ್ಟ ಗಾಂಜಾ ರಾಂಗೆ ವಿಲೇವಾರಿ ಮಾಡಲ್ಪಟ್ಟಿತೆಂಬ ವಿಷಯ ಅದರಮೇಲೆ ಷರಾ ಮಾಡತಕ್ಕದ್ದು. ಲೈಸೆನ್ಸುದಾರನು ಮೇಲ್ಕಂಡಂತೆ ಲೈಸೆನ್ಸನ್ನ ವಾಪಸ್ ಮಾಡದಿದ್ದರೆ ಆತನು ಯಕ್ಸೈಸ್ ಆಕ್ಟು ಅನುಸರಿ ಫಿರ್ಯಾದ್ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

188—ನೇ ಇಸವಿ————ಮಾಹೆ————ತಾರೀಖಿನಲ್ಲಿ ನಮ್ಮ ಸೈನ್ ಮೊಹರಿನಿಂದ ಕೊಡಲ್ಪಟ್ಟಿರುತ್ತೆ.

ಮೊಹರ್.

ಅಮಲ್‌ದಾರ್

——ತಾಲ್ಲೂಕು.

ತಾರೀಖು 14ನೇ ಮೇ 1887.

ನಂ. 16.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗಾ ಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪ್ರಾರಂಭವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡಪರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಟ್ರಾ್ಯರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಪಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕನೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಬೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟು ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಟಿಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ದರಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮುಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ತಿಪ್ಪಸಂದ್ರ ಅಲ್ಲಾಳಸಂದ್ರ ಹೊಸೂರು.	ಗ್ರಾಮ.	ಜೋಡೀದಾರರ ಹೆಸರು!	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಪೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜು ಮಾಡಲ್ಪಡುತ್ತೋ ಆ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು.
ಕಡೂರು. ಸಕ್ಕರೇಪಟ್ಟಣ ಅಂಗಡಹಳ್ಳಿ			ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
	ಶ್ಯಾಮಾವಧಾನಿ ವಗೈರೇ 9 ಜನ	2,988 0 0	1,347 0 0	560 3 0	281—3—7	ಮುಂದಿನ ತಿಂಗಳು ತಾರೀಖು 22ರಲ್ಲು ತಾಲ್ಲೂಕು ಕಛೇರಿಯಲ್ಲಿ ಮತ್ತು ಹರಾಜ್ ತಾ ಅಸಿಸ್ಟೆಂಟ್ ಕಮ್ಮಿಷನರ್. ರೀಖು ವರಿಗಿನ ಬಡ್ಡೀ ಯಾ ಅಮಲೆದಾರ್ರ ರೂ ಬರೂ.

ತಾರೀಖು 27ನೇ ಮೇ 1887.

ನಂ. 28.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಕಟಪಡಿಸುವದೇನೆಂದರೆ, ಇವರಡೀ ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಕಡಬದ ಕೆರೆ ಏರಿ ರಿಪೇರಿಗೋಸ್ಕರ ಮಣ್ಣು ಆಗಿಯುವ ಬಗ್ಯೆ ಬೇಕಾಗಿರುತ್ತೆ:—

ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ವಿವರ.	ನಂಬರು.	ಜೊಪ್ಪಾಪ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.
ಗುಬ್ಬಿ	ಕಡಬ	ನಾರಾಯಣಸಾದಯ್ಯಂಗಾರ್, (ಹಿಡುವಳಿದಾರ ಗರುಡಾಚಾರ್ರು.)	ಬಾಗಾಯತು	54	ಯ. ಗು. ಗ 0 1 113	ರೂ. ಬೈ. ಅ. ಪೈ 0 4 0	ಪೂರ್ವಕ್ಕೆ ಕೊರೆಕಲು, ಪಶ್ಚಿಮಕ್ಕೆ ಬಾಗಾಯತು ನಂಬರ್ 52 ಮತ್ತು 54 ರ ಪೈಕಿ ಉತ್ತರಕ್ಕೆ ಕೆರೆಪರಿ, ದಕ್ಷಿಣಕ್ಕೆ ನಂಬರ್ 54ರ ಪೈಕಿ ಮತ್ತು ಬಾಗಾಯತು ನಂಬರ್ 55.

ತಾರೀಖು 23ನೇ ಮೇ 1887.

ನಂ 30.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈಕೆಳಗೆಕಂಡ ಕಾಯಂಗುತ್ತಾ ಗ್ರಾಮವು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಳಿಗ್ಯೆ 11 ಘಂಟೆಗೆ ಹರಾಜು ಸುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀರ್ಜ್ ಆಫೀಸರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡವೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ಸುಕ್ಸಾನಾಗಿ ಮರಿ ಹರಾಜು ಮಾಡಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಟಿಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುನ್ಸೂಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಜಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮುಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀರ್ಜ ಆಫೀಸರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು ತಪ್ಪೀಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ೯ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾ೯ರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖ್ಯೆರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬ್ಳಿ.	ಗ್ರಾಮ.	ಕಾಯಂಗು ತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಸ್ಯಾಸ್ಯೂರು. ಪಿರಿಯಪಟ್ಟಣ. ಹಿಟ್ಟಿಕೆರೆ.	ಮುಂಡಗದರಿ.	ಕೂಸಂಜಚಾರಿ ಮತ್ತು ಇತರರು ಇಬ್ಬರು	ಯ. ಗುಂ. ಗ. 264 . 3 . 39½	ರೂ. ಆ. ಪೈ. 1621 . 7 . 4	ರೂ. ಆ. ಪೈ. 1056 . 9 . 10	ರೂ. ಆ. ಪೈ. 789 . 14 . 9 ಮತ್ತು ಹರಾಜ್ ತಾರೀಖು ವರಿಗಿನಬಡ್ಡಿ.	ಬರುವ ಜೂಲೈ ತಾರೀಖು 4ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.

ತಾರೀಖು 30ನೇ ಮೇ 1887.

ಕ್ಯಾಂಪ್ ನಂ. 617.—ಮಾಲೂರು ತಾಲ್ಲೂಕು ಅಮಲ್ದಾರ್ ಕೆ. ಶಾಮಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 1 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಶಾಮಯ್ಯಂಗಾರ್ರು ರಜಾದ ಮೇಲೆ ಗೈರ್ ಹಾಜರಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಶಿರಸ್ತೇದಾರ್ ನಾರಾಯಣಸಾಮಿ ನಾಯಡುಯವರು, ಮಾಲೂರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು, ಯಿವರು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 619.—ಗುಬ್ಬೀ ತಾಲ್ಲೂಕು ಅಮಲ್ದಾರ್ ಹೇಮೂ ಹನುಮಂತಯ್ಯನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಸ್ವಂತಕೆಲಸದ ಮೇಲೆ 1 ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 626.—ಸ೯ 1870ನೇ ಇಸವಿ Xನೇ ನಂಬರ್ ಲ್ಯಾಂಡು ಆಕ್ವಿಜಿಷ್ಷನ್ ಆಕ್ಟು 6ನೇ ಸೆಕ್ಷನ್ ನಿಯಮಗಳನು ನರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡೀಕಂಡ ತಫ್ತೀಯಲ್ಲಿ ವಿವರಿಸಲ್ಪಟ್ಟ ಜಮೀನು ಸರ್ತಾರದ ಕೆಲಸಗಳಿಗೋಸ್ಕರ ಅಂದರೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ಕೆರೆ ಕಾಮುಗಾರಿಗಾಗಿ ಮಣ್ಣು ಅಗಿಯುವ ಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಪಿಜುನ್ದಾರರ ಹೆಸರು.	ಬೇಕಾಗಿರುವ ಜಮೀನು ಆವರಣ.				ಚವುತಪ್ಪು.			
				ತರಗಲ್ಲಿ.	ಸ್ಯೆಸಂ	ಜೀಪುಗಾರೀ.	ಬೇರೀಜು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಚಿಕ್ಕನಾಯಕನಹಳ್ಳಿ	ಬಿದ್ದನಹಳ್ಳಿ	ನಂಜಪ್ಪ	ಬಾಗಾಯತು	9	2	39 / 29	12	0	ನರಸಪ್ಪ ಬಿನ್ ದ್ಯಾಮಪ್ಪನವರ ಕೆರೆಯ ಪಶ್ಚಿಮ 4ನೇ ನಂಬರು ಬಾಗಾಯತು	ತಿಮ್ಮನಹಳ್ಳಿ ಕೆರೆ ಯೆಲ್ಲಿ	ಕಾಲುವೆ	ಹೊಳ್ಳಿಗಿ ನಂಬರಿನ ಖುಸ್ಕಿ ಭೂಮಿ

ಕ್ಯಾಂಪ್ ನಂ. 629.—ನೆಲಮಂಗಲ ತಾಲ್ಲೂಕು ಅಮಲ್ದಾರ್ ಯ್ಯೆ. ಗೋಪಾಲಯ್ಯಂಗಾರ್ರಿಗೆ, ಬರುವ ಜೂ೯ 5ನೇ ಮತ್ತುಂ ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಇನ್ಸ್ಪೆಕ್ಟರ್ ವಿಜಯರಂಗ ಮೊದಲಿಯಾರ್ರು, ಸದರೀ ಗೋಪಾಲಯ್ಯಂಗಾರ್ರ ಸ್ಥಿರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ನೆಲಮಂಗಲ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಚಾರ್ಜಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 31ನೇ ಮೇ 1887.

ನಂ. 32.—ಹುಳಿಯಾರ ಡಿಪ್ಯೂಟಿ ಅಮಲ್ದಾರ್ ಸೀತಾರಾಮಯ್ಯನವರಿಗೆ, 1887ನೇ ಮಾರ್ಚಿ 14ನೇ ಮತ್ತುಂ 1912ನೇ ನಂಬರ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟಿದ್ದ 15 ದಿವಸಗಳ ಪ್ರಿವಿಲೀಜ್ ರಜಾ ಜೊತೆಯಾಯಿ 8 ದಿವಸಗಳ ಜಾಸ್ತೀರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೇ ಮೇ 1887.

ಕ್ಯಾಂಪ್ ನಂ. 551.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಜಮೀನುಗಳು ಮೈಸೂರು ಷಹರಿನಲ್ಲಿ ಸರ್ಕಾರ್ ಕೆಲಸಕ್ಕೋಸ್ಕರ ಬೇಕಾಗಿರುತ್ತೆ:—

ತಖ್ತೇ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ.	ವಿಸ್ತೀರ್ಣ. ಉತ್ತರ ದಕ್ಷಿಣ.	ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತಪಸೀಲ್.
			ಅಡಿ.	ಅಡಿ.			
1	ದೊಡ್ಡಕೆರೆ ಯೇರಿ ಹಿಂಭಾಗದ ಕೃಷ್ಣರಾಜಮೊಹಲಿ	ಸಿದ್ದಬಸವದೇವರು	50 500 300 94	150 200 144 74	ಮನೆ ದೇಖೀಲ್ ತೋಟ	ಗಲೀಜು ಜಮೀನು ಮಾಡುವ ಸರಕಾರದ ಕಾರಖಾನೆ ಬೈ.	ಪೂರ್ವಕ್ಕೆ ದೊಡ್ಡಕೆರೆ ಯೇರಿ ಹಿಂಭಾಗದ ರಸ್ತೆ, ಪಶ್ಚಿಮಕ್ಕೆ ಪೂರ್ಣಯ್ಯನವರ ಕಾಲ್ಪೈ, ದಕ್ಷಿಣಕ್ಕೆ ಜಪದಕಟ್ಟೆ ಮಠ, ಉತ್ತರಕ್ಕೆ ಸರಕಾರದ ಗಲೀಜಾ ಕಾರಕಾನೆ.
1	ದೇವರಾಜಮೊಹಲ್ಲಾದ ಸಂತೇಬೀದಿ	ಪುಟ್ಟಬಸಪ್ಪ	58	34	ತಾರಸೆ ಮನೆಯ 2 ಅಂಕಣ, ಹಂಚಿನಮನೆಯ 3 ಅಂಕಣ, ಹಂಚಿನ 3 ಅಂಕಣದ ಕೈಸಾಲೆ ಮತ್ತು ಭಾವಿ.	ರಮಾವಿಲಾಸದ ರಸ್ತೆ ಬಡಾಯಿಸುವ ಬಗ್ಗೆ.	ಪೂರ್ವಕ್ಕೆ ಬಂಜರ್ ಜಮೀನು ದಕ್ಷಿಣಕ್ಕೆ ಶ್ರೀನಿವಾಸಕಟ್ಟೆ, ಪಶ್ಚಿಮಕ್ಕೆ ರಮಾವಿಲಾಸದ ರಸ್ತೆ, ಮತ್ತು ಉತ್ತರಕ್ಕೆ ಜೋಗಿ ಸಿದ್ದಯ್ಯನ ಮನೆ.
2	ಡಿಟೋ	ಡಿಟೋ	ಜೋಗಿ ಸಿದ್ದಯ್ಯ	38	15	ಹಂಚಿನ ಮನೆಯ 4 ಅಂಕಣಮತ್ತು ಹಂಚಿನ ಕೈಸಾಲೆಯ 8 ಅಂಕಣ.	ಡಿಟೋ	ಪೂರ್ವಕ್ಕೆ ಬೊಮ್ಮಯ್ಯನ ಛತ್ರ, ದಕ್ಷಿಣಕ್ಕೆ ಪುಟ್ಟಬಸಪ್ಪನವರ ಮನೆ, ಮತ್ತು ಗುಡಿ, ಪಶ್ಚಿಮಕ್ಕೆ ರಮಾವಿಲಾಸದ ರಸ್ತೆ ಮತ್ತು ಉತ್ತರಕ್ಕೆ ಬೊಮ್ಮಯ್ಯನ ಛತ್ರಕ್ಕೆ ಹೋಗುವ ರಸ್ತೆ.
3	ಡಿಟೋ	ಡಿಟೋ	ಪಾಪಯ್ಯ	96	24	ತಖ್ತಪೋಷ್ ಮನೆಯ 9 ಅಂಕಣ, ಹಂಚಿನ ಮನೆಯ 9 ಅಂಕಣ ಮತ್ತು ಹಂಚಿನ ಕೈಸಾಲೆಯ 9 ಅಂಕಣ	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ನರಸಿಂಹಯ್ಯನ ಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಕಣ್ಣುವಯ್ಯನ ಮನೆ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ.	ವಿಸ್ತೀರ್ಣ. ಉತ್ತರ ದಕ್ಷಿಣ.	ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತಪಸೀಲ್.
4	ದೇವರಾಜ ಮೊಹಲಾದ ಸಂತೇಬೀದಿ.	ನರಸಿಹ್ಮ.	96	13	ಹಂಚಿನ ಮನೆಯ $4\frac{1}{2}$ ಅಂಕಣ ಮತ್ತು ಹಂಚಿನ ಕೈಸಾಲೆಯ 3 ಅಂಕಣ.	ರಮಾವಿಲಾಸದ ರ ಬಡಾಯಿಸುವ ಬಗ್ಯೆ.	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ಚಿನ್ನಪ್ಪನಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಪಾಪಯ್ಯನ ಮನೆ.
5	ಡಿಟೋ ಡಿಟೋ	ಚಿನ್ನಯ್ಯ	96	13	ಹಂಚಿನ ಮನೆಯ $4\frac{1}{2}$ ಅಂಕಣ ಮತ್ತು ಕೈಸಾಲೆಯ 3 ಅಂಕಣ.	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ಪಶ್ಚಿಮಕ್ಕೆ ರಾಜಬೀದಿ, ಉತ್ತರಕ್ಕೆ ನರಸಿಹ್ಮಯ್ಯನ ಮನೆ, ದಕ್ಷಿಣಕ್ಕೆ ನರಸಿಹ್ಮಯ್ಯನ ಮನೆ.
1	ಕೃಷ್ಣರಾಜ ಮೊಹಲಾದ ವರಹಾಸ್ವಾಮಿ ಅಗ್ರಹಾರದ ಬೀದಿ.	ಮೈಸೂರು ತಾಲ್ಲೂಕು ರಿಕಾರ್ಡ್ ಕೀಪರ್ ವ್ಯಾಸರಾಯರು.	34	6	ಹಂಚಿನ ಮನೆಯ 5 ಅಂಕಣ.	ಪಾಕೀಜ್ ಇಡತಕ್ಕ ಬಗ್ಯೆ ಚರಂಡಿ ತಯಾರಿಗೋಸ್ಕರ.	ಪೂರ್ವಕ್ಕೆ ಭೀಮರಾಯರ ಮನೆ, ಪಶ್ಚಿಮಕ್ಕೆ ಶಾಮರಾಯರ ಮನೆ, ದಕ್ಷಿಣಕ್ಕೆ ನೀಲಕಂಠರಾಯರ ಮನೆ ಮತ್ತು ಉತ್ತರಕ್ಕೆ ವ್ಯಾಸರಾಯರ ಮನೆ.
1	ನಜರ್‌ಬಾದ್ ಮೊಹಲಾದ ಇಟ್ಟಗೆಣಗೂಡು.	ಬಂಡಿ ಚಿಕ್ಕಂಣ ಬಂಡಿ ಲಿಂಗಂಣ.	$24\frac{1}{2}$ 37	13 18	ಹಂಚಿನ ಮನೆಗಳು ಹಿತ್ತಲುಗಳು ಸಹ.	ಇಟ್ಟಗೆ ಗೂಡಿನ ರಸ್ತೆಯ ಅಗಲ ಬಡಾಯಿಸುವಬಗ್ಯೆ.	ಪೂರ್ವಕ್ಕೆ ರಾಜಬೀದಿ, ಪಶ್ಚಿಮಕ್ಕೆ ಬೆಟ್ಟಂಣನ ಮನೆ, ಉತ್ತರಕ್ಕೆ ಭವಾನಮ್ಮನ ಮನೆ, ದಕ್ಷಿಣಕ್ಕೆ ಮ್ಯುನಿಸಿಪಲ್ ಬಂಜರ್ ಜಮೀನ್.

ಹುಕ್ಕುಂ ಬನೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಿಟೇರಿ.